Granting Agricultural Lands to Landless People.

*Q.—54. **Sri Kadidal MANJAPPA** (Shimoga District—General)—

Will the Government be pleased to state:—

(*a*) whether they have laid down any definite policy for granting agricultural lands to landless people;

(*b*) whether it has come to their notice that in the majority of cases where lands have been applied for, the lands are sold in public auction, as a result of which the landless persons have no chance of acquiring any land?

A.—**The Hon'ble Sri H. SIDDAIYA** (Minister for Revenue and Excise).—

(*a*) Yes.

(*b*) No. Lands are sold by public auction after observing the prescribed formalities only when the land is considered to be valuable and when there is keen competition for the same. In other cases they are granted to the darkhastdars, after the necessary enquiries are completed, either at upset price or free of cost in deserving cases.

Sri Kadidal MANJAPPA.—Is it not desirable to give lands to landless people?

***The Hon'ble Sri H SIDDAIYA.**—Very desirable.

Sri Kadidal MANJAPPA.—Is it possible to acquire land not cultivated and distribute it to landless people?

Sri H. SIDDAIYA.—When the land is very valuable and fertile, there would be keen competition and demand by numerous persons. The difficulty would arise in disposing those lands.

Sri Kadidal MANJAPPA.—Is it competition from landless people or from people who want to acquire more land?

The Hon'ble Sri H. SIDDAIYA.—Very often both.

Sri Kadidal MANJAPPA.—What exactly is the difficulty of the Government in making a rule to the effect that lands would be given only for landless people?

The Hon'ble Sri H. SIDDAIYA.—Preference is always shown to the poor and landless people and particularly to those who are in need of land.

Sri Kadidal MANJAPPA.—My question is, what is the difficulty in making a rule to the effect that land will be granted free of cost only to the landless?

The Hon'ble Sri H. SIDDAIYA.—This has been observed in many cases but a general rule will not be very desirable due to the special conditions prevailing in certain localities.

Sri Kadidal MANJAPPA.—Why, what is the difficulty?

The Hon'ble Sri H. SIDDAIYA.—We must realise money also. Government want money. At the same time, if the land is very valuable, it is not very desirable to grant land free of cost.

Sri Kadidal MANJAPPA.—Then, how are you going to help the landless people?

The Hon'ble Sri H. SIDDAIYA.—Some concession will be shown. Very often the landless people will be given preference, at nominal upset price and very often lands are granted free of cost also.

ಶ್ರೀ ಜಿ. ವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ನಿಸ್ಸಾನಿದಲ್ಲಿ ಸಾಗುವಳಿಗೆ ಲಾಯಕ್ಕಾದ ಜಮೀನುಗಳು ಇನ್ನೂ ಎಷ್ಟು ಉಳಿದಿರಬಹುದು?

*ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನುಮಾರು 12 ಲಕ್ಷ ಎಕರೆ.

ಶ್ರೀ ಜಿ. ವೀರಪ್ಪನವರು.—ಜಮೀನು ಸಾಗುವಳಿಗೆ ಅರ್ಜಿ ಹಾಕಿಕೊಳ್ಳುವುದರಲ್ಲಿ ಕನಿಷ್ಠಪಕ್ಷ ಇಷ್ಟು ಕೊಡಬೇಕೆಂದೇನಾದರೂ ಗೊತ್ತುಪಾಡಿದ್ದೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸಾಮಾನ್ಯವಾಗಿ ಐದು ಎಕರೆ ಕೊಡಬೇಕೆಂದು ಮಾಡಿಕೊಂಡಿದ್ದೇವೆ.

ಶ್ರೀ ಜಿ. ವೀರಪ್ಪನವರು.—ಈಚೆಲು ವನಗಳನ್ನು ಯಾರಾದರೂ ಸಾಗಿಗೆ ಕೇಳಿದರೆ ಅವುಗಳನ್ನೂ ಕೊಡುವ ಆಲೋಚನೆ ಮಾಡಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೌದು; ಕೊಡುವ ಆಲೋಚನೆ ಮಾಡಿದೆ.

ಶ್ರೀ ಜಿ. ವೀರಪ್ಪನವರು.—ಈ ನಂದರ್ಭದಲ್ಲಿ ತಾವೊಂದು ಕಮಿಟಿ ಮಾಡಿದ್ದೀರಲ್ಲಾ, ಆ ಕಮಿಟಿಯವರು ಈ ಜಮೀನುಗಳನ್ನು ಜಮೀನಿಲ್ಲದ ಜನರಿಗೆ ಸಾಗಿಗೆ ಕೊಡಬೇಕೆಂದು ಶಿಫಾರಸು ಮಾಡಿಲ್ಲವೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೊಡಬೇಕೆಂದು ಹೇಳಿ ಕೋರಾರ, ಚಿತ್ರದುರ್ಗ ಮತ್ತು ತುಮಕೂರು ಡಿಸ್ಟ್ರಿಕ್ಟ್‌ಗಳಲ್ಲಿ ಶಿಫಾರಸ್ಸು ಮಾಡಿದ್ದಾರೆ.

ಶ್ರೀ ಜಿ. ವೀರಪ್ಪನವರು.—ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಎಷ್ಟು ಎಕರೆಗಳಷ್ಟು ಕೊಡಬೇಕೆಂದು ಶಿಫಾರಸು ಮಾಡಿದ್ದಾರೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ತುಮಕೂರಿನಲ್ಲಿ 6,588 ಎಕರೆಗಳನ್ನು ಮತ್ತು ಚಿತ್ರದುರ್ಗದಲ್ಲಿ 22,192 ಎಕರೆಗಳನ್ನು ಕೊಡಬಹುದೆಂದು ಹೇಳಿದ್ದಾರೆ.

ಶ್ರೀ ಜಿ. ವೀರಪ್ಪನವರು.—ಅದರಂತೆ ಈ ಮೂರು ವರ್ಷದಿಂದ ಎಷ್ಟು ಎಕರೆ ಸಾಗಿಗೆ ಕೊಟ್ಟಿದ್ದೀರಿ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇವುಗಳ ಬಗ್ಗೆ ಈಗ ತಾನೆ ಮೊನ್ನೆ ಮೊನ್ನೆ ಹುಕುಂ ಸಾದರವಾಗಿದೆ. ಇನ್ನು ಮುಂದೆ ಜಮೀನುಗಳನ್ನು ಕೊಡಲಾಗುತ್ತದೆ.

ಶ್ರೀ ಜಿ. ವೀರಪ್ಪನವರು.—ಈಗ ಒಂದು ವರ್ಷದಿಂದ ಈ ಈಚೆಯವನ ಮತ್ತು ಇತರ ಜಮೀನುಗಳನ್ನು ಎಷ್ಟು ಎಕರೆಗಳಷ್ಟು ಸಾಗಿಗೆ ಕೊಟ್ಟಿದ್ದೀರಿ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.— ಆ ವಿವರ ಗಳನ್ನೆಲ್ಲಾ ಈಗ ಹೇಳುವುದಕ್ಕಾಗುವುದಿಲ್ಲ; ಆದರೆ ಒಟ್ಟಿನಲ್ಲಿ ಇಷ್ಟು ಹೇಳಬಹುದು, ಅಧಿಕ ಆಹಾರೋತ್ಪತ್ತಿ ಯೋಜನೆ ಪ್ರಕಾರಕ್ಕೆ ಬಂದಿರುವಾಗಿನಿಂದ ಹಿಂದಿನ ಜುಲೈ ವರೆಗೆ 13,25000 ಎಕರೆಗಳನ್ನು ವಿಲೇ ಮಾಡಲಾಗಿದೆ.

ಶ್ರೀ ಜಿ. ವೀರಪ್ಪನವರು.—ನೀವು ಕೊಟ್ಟ ಜಮೀನು ಗಳಲ್ಲಿ ಅನೇಕರು ವ್ಯಾಪಾರದ ಬೆಳೆಗಳನ್ನು ಬೆಳೆಯುತ್ತಿದ್ದಾರೆಂಬುದು ಗೊತ್ತಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈ ಜಮೀನು ಗಳನ್ನು ಕೊಡುವುದರಲ್ಲಿ ಒಂದು ಮುಖ್ಯ ಷರತ್ತೇನೆಂದರೆ, ಅವರು ಮೊದಲು ಎರಡು ವರ್ಷ ಆಹಾರದ ಬೆಳೆಯನ್ನೇ ಇಡಬೇಕೆಂಬುದು. ಅದನ್ನು ಮಾಡದೆ ಹೋಗಿದ್ದರೆ ಅತನಿಂದ ಸಾಗುವಳಿ ಚೀಟಿಯನ್ನು ವಾಪಸು ಕಿತ್ತುಕೊಳ್ಳುತ್ತೇವೆ.

ಶ್ರೀ ಜಿ. ವೀರಪ್ಪನವರು.—ಎಷ್ಟೋ ಕಡೆಗಳಲ್ಲಿ ಹೊಗೆಸೊಪ್ಪು ಮೊದಲಾದ ವ್ಯಾಪಾರದ ಬೆಳೆಗಳನ್ನು ಯಥೇಚ್ಛವಾಗಿ ಬೆಳೆಯುತ್ತಿದ್ದಾರೆಂಬುದು ಗೊತ್ತಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈಚೀಚೆಗೆ ಕೆಲವು ಕಡೆಗಳಲ್ಲಿ ಹಾಗೆ ಮಾಡುತ್ತಿದ್ದಾರೆಂದು ತಿಳಿದು ಬಂದಿದೆ.

Sri G. VEERAPPA.– What steps have been taken to prevent it?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸದ್ಯಕ್ಕೆ ಮಾಡಿರುವ ನಿಯಮಗಳ ಮೇರೆಗೆ ಮೊದಲನ ಒಂದೆರಡು ವರ್ಷ ಆಹಾರದ ಬೆಳೆಗಳನ್ನೇ ಮಾಡಬೇಕೆಂದು ಗೊತ್ತುಮಾಡಿದ್ದೇವೆ. ಅಲ್ಲಂದಾಚೆಗೆ ಇಂಥದೇ ಬೆಳೆಯಬೇಕೆಂದು ನಿರ್ಬಂಧಮಾಡಿಲ್ಲ.

ಶ್ರೀ ಎ. ಭೀಮಪ್ಪನಾಯಕರ (ಚಿತ್ರದುರ್ಗಜಿಲ್ಲೆ).—ಜಮೀನುಗಳು ಬೆರೆ ಬಾಳತಕ್ಕವುಗಳಾಗಿಲ್ಲದಿದ್ದರೂ ಅವುಗಳನ್ನು ಹರಾಜಿನಲ್ಲಿ ಪೈಪೋಟಿಯ ಮೇಲೆ ಕೊಡಬೇಕೆಂದಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆಯಾ ಸಂದರ್ಭ ನೋಡಿಕೊಂಡು ಕೊಡುತ್ತೇವೆ.

ಶ್ರೀ ಎ. ಭೀಮಪ್ಪನಾಯಕರು.— ಜಮೀನು ಬೆರೆ ಬಾಳುವಂಥದೇ ಅಲ್ಲವೇ ಎಂಬುದನ್ನು ನಿರ್ಧರ ಮಾಡಿಟ್ಟಿದ್ದೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದನ್ನು ಸ್ಥಳೀಯ ರೆವಿನ್ಯೂ ಆಫೀಸರುಗಳು ಆಯಾ ಭಾಗದ ಮುಖಂಡರನ್ನೂ ಮುಖ್ಯಮುಖ್ಯ ಗ್ರಾಮಸ್ಥರನ್ನೂ ಕರೆಸಿಕೊಂಡು ಮಹಜರ್ ಮಾಡಿ ತೀರ್ಮಾನಿಸುತ್ತಾರೆ.

ಶ್ರೀ ಎ. ಭೀಮಪ್ಪನಾಯಕರು.—ಈಗ ನೀವು ಈಎಲ್ಲ ಜಮೀನುಗಳನ್ನೂ 'ಎ' ತರಗತಿಯದು, 'ಬಿ' ತರಗತಿಯದು ಎಂದು ವಿಂಗಡಿಸಿ 'ಬಿ' ತರಗತಿ ಜಮೀನುಗಳನ್ನು ಹರಾಜಿಗಿಡದೆ ವಿಲೇ ಮಾತ್ರಬೇಕೆಂದು ಮಾಡಿಲ್ಲವೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಮಾಡಿದೆ.

ಶ್ರೀ ಎ. ಭೀಮಪ್ಪನಾಯಕರು.—ಹಾಗಿದ್ದರೂ ಈಗ ಈ 'ಬಿ' ಕ್ಲಾಸ್ ಜಮೀನುಗಳನ್ನೂ ಹರಾಜು ಮಾಡಿ ಕೊಡುತ್ತಿಲ್ಲವೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹರಾಜಿಲ್ಲ ದೆಯೂ ಕೊಟ್ಟಿದೆ, ಹರಾಜುಮಾಡಿಯೂ ಕೊಟ್ಟಿದೆ.

ಶ್ರೀ ಎ. ಭೀಮಪ್ಪನಾಯಕರು.—ಹಾಗೆ ಮಾಡಿದರೆ ಜಮೀನಿಲ್ಲದ ರೈತರುಗಳಿಗೆ ಸಾಗುವಳಿಗೆ ಜಮೀನು ಸಿಕ್ಕುವುದು ಕಷ್ಟವಾಗುತ್ತದೆಯಲ್ಲವೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹಾಗೆ ಹೇಳುವುದಕ್ಕಾಗುವುದಿಲ್ಲ; ಜಮೀನಿಲ್ಲದವರಿಗೂ ಜಮೀನು ಕೊಡಲಾಗುತ್ತಿದೆ.

Sri A. BHEEMAPPA NAIK.– Can we not find out a method by which we can see that really deserving men get land without auctioning?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅನೇಕ ಸಂದರ್ಭಗಳಲ್ಲಿ ಸ್ಥಳೀಯ ರೆವಿನ್ಯೂ ಅಧಿಕಾರಿಗಳು ಸೂಕ್ಷ್ಮ ವಿಚಾರಣೆ ನಡೆಸಿ ಜಮೀನಿಲ್ಲದವರಿಗೆ ಜಮೀನು ಗಳನ್ನು ಕೊಡಿಸಲು ಏರ್ಪಾಡು ಮಾಡುತ್ತಾರೆ.

ಶ್ರೀ ಎ. ಭೀಮಪ್ಪನಾಯಕರು.—ಅದಕ್ಕೋಸ್ಕರವಾಗಿಯೇ ಹೀಗಾಗುತ್ತಿರುವುದನ್ನು ತಡೆಗಟ್ಟುವುದಕ್ಕಾಗಿ ಮತ್ತು ಜಮೀನ್ದಾರರಲ್ಲದವರಿಗೆ ನ್ಯಾಯವಾಗಿ ಜಮೀನ್ ದೊರೆಯುವಂತೆ ಮಾಡುವುದಕ್ಕಾಗಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದೊಂದು ಸಮಿತಿಯನ್ನು ನೇಮಕ ಮಾಡಿ ತನ್ಮೂಲಕ ಎಲ್ಲರಿಗೂ ಒಂದೇ ರೀತಿಯಲ್ಲಿ ಜಮೀನು ಲಭಿಸುವಂತೆ ಮಾಡಬಹುದೇ ಹೊರತು ಇಲ್ಲದಿದ್ದರೆ ಅದು ಸಾಧ್ಯವಿಲ್ಲವೆಂದು ಜನರು ಒತ್ತಾಯ ಪಡಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಹೀಗೆ ಹಿಂದೆ ಮಾಡಿರಲಿಲ್ಲವೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಎ. ಭೀಮಪ್ಪನಾಯಕರು.—ಅದು ಬೆರೆಯಾಗ ತಕ್ಕ ಜಮೀನಾಗಲೀ ಅಥವಾ ಬೆರೆಯಾಗದಿರತಕ್ಕ ಜಮೀನಾಗಲೀ ಅದನ್ನು ವಿಲೇವಾರಿ ಮಾಡುವುದಕ್ಕೆ ಹರಾಜು ಒಂದೇ ಮಾರ್ಗವೆಂದು ಭಾವಿಸದೆ ಬೇರೆ ವಿಧಾನದಿಂದ ಅದನ್ನು ವಿಲೇವಾರಿ ಮಾಡತಕ್ಕ ಮಾರ್ಗವನ್ನು ಆಲೋಚನೆ ಮಾಡುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹರಾಜು ಒಂದೇ ಮಾರ್ಗವಲ್ಲ, ಬೇರೆ ಮಾರ್ಗಗಳೂ ಇವೆಯೆಂದು ಆಗಲೇ ಉತ್ತರ ಕೊಡಲಾಗಿದೆ.

ಶ್ರೀ ಎ. ಭೀಮಪ್ಪನಾಯಕರು.— ಅವುಗಳನ್ನು ಸಭೆಯ ಗಮನಕ್ಕೆ ತರುವಿರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇರತಕ್ಕ ಮಾರ್ಗಗಳನ್ನೆಲ್ಲಾ ಆಗಲೇ ತಿಳಿಸಿದೆ.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ, ನಿಮ್ಮ ಪಂಡ).—ಜಮೀನಿಲ್ಲದ ಬಡವರು ಬೆರೆಯುಳ್ಳ ಜಮೀನನ್ನು ತೆಗೆದುಕೊಳ್ಳಬಾರದೆಂದು ತಮ್ಮ ಗಮನದಲ್ಲಿಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ತಮ್ಮ ಪ್ರಶ್ನೆ ಸರಿಯಾಗಿ ಅರ್ಥವಾಗುತ್ತಿಲ್ಲ.

ಶ್ರೀ ಎಂ. ಮಾದಯ್ಯನವರು.—ಜಮೀನಿಲ್ಲದ ಬಡವರು ಜಮೀನಿಗಾಗಿ ಅರ್ಜಿಹಾಕಿದಾಗ ಅವರು ಬೆರೆಯುಳ್ಳ ಜಮೀನನ್ನು ಬಿಟ್ಟು ಬೆರೆಯಿಲ್ಲದ ಜಮೀನಿಗೆ ಮಾತ್ರವೇ ಅರ್ಜಿಹಾಕಬೇಕೆಂದಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಲ್ಲ.

ಶ್ರೀ ಎಂ. ಮಾದಯ್ಯನವರು.—ಹಾಗಿದ್ದಲ್ಲಿಯೂ ಬಡವರಾದವರಿಗೆ ಸರಿಯಾಗಿ ಒಳ್ಳೆಯ ಜಮೀನು ಸಿಕ್ಕುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎಲ್ಲಾ ಸಂದರ್ಭಗಳಲ್ಲಿಯೂ ಆ ರೀತಿಯಾಗಿಲ್ಲ.

ಶ್ರೀ ಎಂ. ಮಾದಯ್ಯನವರು.—ಹಾಗಿದ್ದಲ್ಲಿ ಬಡವರಿಗೂ ಏತಕ್ಕೆ ಬೆಲೆ ಬಾಳತಕ್ಕ ಜಮೀನುಗಳನ್ನು ಕೊಡಬಾರದು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವು ಸಂದರ್ಭಗಳಲ್ಲಿ ವಿಶೇಷವಾದ ಮಾತಿನಕ್ಕ ಜಮೀನು ಸ್ವಲ್ಪ ಎದ್ದು ಅಂದರೆ 20 ಎಕರೆ ಜಮೀನಿದ್ದು ಕೇಳತಕ್ಕವರು 50–60 ಜನಗಳ ಮೇಲ್ಪಟ್ಟಿದ್ದರೆ, ಅಂಥಾ ಸಂದರ್ಭಗಳಲ್ಲಿ ಬಡವರಿಗೆ ಜಮೀನು ದೊರೆಯದೆ ಹೋಗಬಹುದು. ಕಾರಣ, ಹರಾಜಿನಲ್ಲಿ ಅವರು ಹೆಚ್ಚು ಮೊಬಲಿಗೆ ಸವಾಲ್ ಮಾಡದೇ ಇರತಕ್ಕದ್ದು.

ಶ್ರೀ ಎಂ. ಮಾದಯ್ಯನವರು.—ಮೊದಲು ಅರ್ಜಿ ಹಾಕಿಕೊಂಡವರಿಗೇಕೆ ತಾವು ಕೊಡಬಾರದು? ಆರೀತಿ ತಾವೇಕೆ ಆರ್ಡರ್ ಮಾಡಬಾರದು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹಾಗೂ ಕೊಡರಾಗುತ್ತಿದೆಯೆಂದು ಉತ್ತರ ಕೊಡರಾಗಿದೆ.

ಶ್ರೀ ಎಂ. ಮಾದಯ್ಯನವರು.—ಹಾಗೆ ಕೊಡುತ್ತಿಲ್ಲ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ತಮ್ಮ ಅಭಿಪ್ರಾಯ.

ಶ್ರೀ ಎಂ. ಮಾದಯ್ಯನವರು.—ಹಾಗಾದರೆ ಬಡವರಾದವರು ಬೆಲೆಯುಳ್ಳ ಜಮೀನನ್ನು ಪಡೆಯುಬಾರದೆಂದು ತಮ್ಮ ಅಭಿಪ್ರಾಯವೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ತಮ್ಮ ಪ್ರಶ್ನೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು.—ಹಾಗೆ ಕೊಡಕೂಡದೆಂದು ಎಲ್ಲಿಯೂ ಹೇಳಿಲ್ಲವೆಂದು ಆಗಲೆ ಹೇಳಿದ್ದಾರೆ.

Sri M. MADIAH.—May I bring it to the notice of the Government that there are certain Standing Rules under the Land Revenue Code to the effect that lands which cost more than Rs. 200 should not be given to landless applicants?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—400–500 ರೂಪಾಯಿಗಳ ತನಕ ಬೆಲೆ ಬಾಳುವಂಥ ಜಮೀನುಗಳನ್ನು ಕೊಟ್ಟಿರುವ ನಿದರ್ಶನಗಳ ಬೇಕಾದಷ್ಟಿವೆ.

Sri M. MADIAH.—Have the Government considered this question that no longer this policy of not granting valuable lands to the landless classes should be continued?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಯಾವ ಪಾಲಿಸಿ?

Sri M. MADIAH.—Have they considered that it is very desirable to grant lands to the first applicant among the landless classes?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹಾಗೂ ಕೊಡರಾಗುತ್ತಿದೆಯೆಂದು ಹೇಳಿಲ್ಲವೇ?

ಶ್ರೀ ಎಂ. ಮಾದಯ್ಯನವರು.—ಹಾಗೆ ಮಾಡುತ್ತಿಲ್ಲ ಸ್ವಾಮಿ, ದೇಶಾದ್ಯಂತವೂ ಹೆಚ್ಚು ಆಹಾರ ಬೆಳೆಯಿರಿ ಎಂದು ಹೇಳುತ್ತಿದ್ದಾಗ್ಗೂ ಈ ಆಹಾರಾಭಾವ ಇರಲು ಇವರು ಅರ್ಹರಾದವರಿಗೆ ಸಾಕಷ್ಟು ಜಮೀನು ಕೊಡದಿರುವುದೇ ಕಾರಣವೆಂಬುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ತಾವು ಕೇಳರತಕ್ಕ ಪ್ರಶ್ನೆಗಳನ್ನೇ ಮತ್ತೆ ಮತ್ತೆ ಕೇಳುತ್ತಿದ್ದೀರಿ.

ಶ್ರೀ ಎಂ. ಮಾದಯ್ಯನವರು.—ಎಷ್ಟು ಬೆಲೆಗೆ ಮೇಲ್ಪಟ್ಟ ಜಮೀನುಗಳನ್ನು ಬಡವರಾದವರಿಗೆ ಕೊಡಕೂಡದೆಂದಿದೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎಷ್ಟೇ ಬೆಲೆಯುಳ್ಳ ಜಮೀನಾಗಿದ್ದರೂ ಎಲ್ಲರಿಗೂ ಕೊಡಲಕ್ಕೆ ಅವಕಾಶವಾಡಲಾಗಿದೆ.

ಶ್ರೀ ಎಂ. ಮಾದಯ್ಯನವರು.—ಹಾಗಿದ್ದಲ್ಲಿ ಹರಾಜನ್ನು ತಾವೇಕೆ ನಿಲ್ಲಿಸಬಾರದು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎಲ್ಲಾ ಸಂದರ್ಭಗಳಲ್ಲಿಯೂ ಹರಾಜು ಮೂಲಕ ವಿಲೇವಾರಿ ಮಾಡುತ್ತಿಲ್ಲ.

ಶ್ರೀ ಎಂ. ಮಾದಯ್ಯನವರು.—ಅಂದಮೇಲೆ ಕೆಲವು ಸಂದರ್ಭಗಳಲ್ಲಾದರೂ ಹಾಗೆ ಮಾಡರಾಗುತ್ತದೆಂದು ಅರ್ಥವಾಗುತ್ತಲ್ಲವೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೌದು.

ಶ್ರೀ ಎಂ. ಮಾದಯ್ಯನವರು.—ಆ ಹರಾಜು ಮಾಡತಕ್ಕ ಪದ್ಧತಿಯನ್ನೇ ವಜಾ ಮಾಡರಾಗುವುದಿಲ್ಲವೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—700–800 ರೂಪಾಯಿಗಳ ಬೆಲೆ ಬಾಳುವಂಥ 3 ಎಕರೆ ಜಮೀನಿದ್ದು ಅದನ್ನು ನನಗೆ ಕೊಡಿ, ನನಗೆ ಕೊಡಿ ಎಂದು ಕೇಳತಕ್ಕವರು 60–70 ಜನಗಳಿದ್ದಾಗ, ಅಂದರೆ ಆ 60–70 ಜನರೂ ಜಮೀನಾದಾರರಲ್ಲದವರೇ ಆಗಿದ್ದರೂ, ಅಂಥಾ ಸಂದರ್ಭದಲ್ಲಿ ಆ ಜಮೀನನ್ನು ವಿಲೇವಾರಿ ಮಾಡಲು ಸರಿಯಾದ ಮತ್ತೂ ಸಾಧುವಾದ ಮಾರ್ಗವೆಂದರೆ ಅದು 'ಹರಾಜು' ಮೂಲಕವೇ ಎಂದು ರೆವಿನ್ಯೂ ಅಧಿಕಾರಿಗಳು ಭಾವಿಸಿದ್ದಾರೆ.

ಶ್ರೀ ಎಂ. ಮಾದಯ್ಯನವರು.—ಮೊದಲು ಅರ್ಜಿ ಹಾಕಿದವರಿಗೆ ತಾವೇಕೆ ಕೊಡಬಾರದು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದನ್ನೂ ಗಮನದಲ್ಲಿಟ್ಟುಕೊಂಡೇ ವಿಲೇವಾರಿ ಮಾಡರಾಗುತ್ತಿದೆ.

ಶ್ರೀ ಎಂ. ಮಾದಯ್ಯನವರು.—ಸಾಮಾನ್ಯ ಜನಗಳಿಗೆ ಜಮೀನೇ ದೊರೆಯದೆ ತುಂಬಾ ಅನಾನುಕೂಲವಾತ್ತು, ತೊಂದರೆಯಾಗುತ್ತಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಅಧ್ಯಕ್ಷರು.—ಆಗಲೇ ಆ ಪ್ರಶ್ನೆಗಳೆಲ್ಲಾ ಕೇಳಿ ಆಗಿದೆ.

ಶ್ರೀ ಕೆ. ಎಚ್. ಮುದಿಯಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಎಕ್ಸ್ ಸ್ಕೈಜ್ ಖಾತೆಯಲ್ಲಿದ್ದ ವ್ಯವಸಾಯಕ್ಕೆ ಕೊಡಬಹುದಾದ ಜಮೀನು ಎಷ್ಟಿರುತ್ತೆಂಬುದನ್ನು ತಿಳಿಸರಾಯಿತು. ಅದರಂತೆ ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಎಕರೆ ಜಮೀನಿವೆಯೆಂಬುದನ್ನು ತಿಳಿಸುವಿರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಚಿಕ್ಕಮಗಳೂರು ಜಿಲ್ಲೆಯಲ್ಲಿ ನಮಾರು 25,436 ಎಕರೆಗಳನ್ನು ಕೊಡಬಹುದೆಂದು ತಿಳಿಸಲಾಗಿದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಅಷ್ಟು ಎಕರೆಗಳನ್ನೂ ಕೊಡಬೇಕೆಂದು ತಾವು ಆಜ್ಞೆ ಹೊರಡಿಸಿದ್ದೀರಾ?

ಮಾನ್ಯ ಶ್ರೀ ಎಚ್ ಸಿದ್ದಯ್ಯನವರು.—ಎಲ್ಲಕ್ಕೂ ಆಜ್ಞೆ ಹೊರಟಿಲ್ಲ; ಹೊರಡುವುದರಲ್ಲಿದೆ.

ಶ್ರೀ ಕೆ. ಎಚ್. ಮುದಿಯಪ್ಪನವರು.—ಈ ಬಗ್ಗೆ ಈಗಾಗಲೇ ಕೋಲಾರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿರತಕ್ಕ ಜಮೀನುಗಳ ಬಗ್ಗೆ ಆಜ್ಞೆ ಹೊರಡಿಸಲಾಗಿದೆ. ಅಂದರೆ ನಮ್ಮ ಜಿಲ್ಲೆಯಲ್ಲಿರತಕ್ಕ ಜಮೀನಿಗೆ ಯಾವಾಗ ಆಜ್ಞೆ ಹೊರಬೀಳುತ್ತದೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದಷ್ಟು ಜಾಗ್ರತೆ ಹೊರಡಿಸಲಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಚಿತ್ರದುರ್ಗ ಜಿಲ್ಲೆಯಲ್ಲಿ ಎಕ್ಸೆಸ್ ಲ್ಯಾಂಡ್ ಖರಾಬಿಗೆ ದರಖಾಸ್ತು ಬಂದಿದ್ದು ಆ ಬಗ್ಗೆ ವಿಲೇವಾರಿಯಾಗದಿರುವಂಥ ಜಮೀನು ಇನ್ನೂ ಎಷ್ಟಿದೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಚಿತ್ರದುರ್ಗ ಜಿಲ್ಲೆಯಲ್ಲಿರುವುದು ಒಟ್ಟು 55,771 ಎಕರೆ. ಆ ಪೈಕಿ 22,192 ಎಕರೆಗಳನ್ನು ಈಗಾಗಲೇ ವಿಲೇವಾರಿ ಮಾಡಲಾಗಿದೆ. ಅಂದಮೇಲೆ ಇದನ್ನು ಅದರಲ್ಲಿ ಕಳೆದರೆ ಎಷ್ಟು ಉಳಿದಿದೆ ಎಂಬುದು ಗೊತ್ತಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಹಾಗೆ ಬಾಕಿ ವಿಲೇವಾರಿಯಾಗದೆ ಉಳಿದಿರತಕ್ಕದ್ದನ್ನು ಏತಕ್ಕಾಗಿ ವಿಲೇವಾರಿ ಮಾಡಲಲ್ಲವೆಂಬುದಕ್ಕೆ ಕಾರಣಗಳನ್ನು ತಿಳಿಸುವಿರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕಾರಣಗಳು ನಾನಾ ರೂಪದಲ್ಲಿವೆ. ಕೆಲವು ಕಡೆ ಅಂಥಾ ಜಮೀನುಗಳಲ್ಲಿ ,ಟ್ಯಾಂಕ್‌ಬೆಡ್‌ಗಳಿರುತ್ತವೆ, ಮತ್ತೆ ಕೆಲವುಕಡೆ ಥಾನರ್ ಬಂದಿರುತ್ತದೆ, ಇನ್ನೂ ಕೆಲವು ಗೋಪಾಳಕ್ಕೆ ಸೇರಿರುತ್ತವೆ, ಮತ್ತೆ ಕೆಲವು ಸ್ಮಶಾನಕ್ಕೆ ಬಿಡಲ್ಪಟ್ಟವಾಗಿವೆ. ಇತ್ಯಾದಿ ಅನೇಕ ಕಾರಣಗಳಿಂದ ಕೊಡಲಾಗಿಲ್ಲ.

ಶ್ರೀ ಎಚ್. ಸಿದ್ದವೀರಪ್ಪನವರು.—ಅಂಥಾ ಜಮೀನುಗಳನ್ನು ಕೊಟ್ಟರೆ ಸರ್ಕಾರಕ್ಕೆ ಅನಾನುಕೂಲವಾಗುತ್ತದೆಂದು ತಮ್ಮ ಭಾವನೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೌದು.

ಶ್ರೀ ಎಚ್. ಸಿದ್ದವೀರಪ್ಪನವರು.—ಸಾರ್ವಜನಿಕರಿಗೆ ಹಾಗೆ ವಿಲೇವಾರಿ ಮಾಡಬಹುದೆಂದು ಹೊರಡಿಸಿರುವ ಸರ್ಕಾರಿ ಆಜ್ಞೆಯ ಪ್ರತಿಯೊಂದನ್ನು ಈ ನಭೆಗೆ ಒದಗಿಸುವಿರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆಜ್ಞೆಯನ್ನು ಆಗಲೇ ಹೊರಡಿಸಲಾಗಿದೆ. ಅದರ ಪ್ರತಿಯನ್ನು ಮೈಸೂರು ಗೆಜೆಟ್ಟಿನಲ್ಲಿ ಸೇರಿಸಿ ಪ್ರತಿಯೊಬ್ಬರಿಗೂ ಒದಗಿಸಲಾಗಿದೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಒಬ್ಬ ರೈತನಿಗೆ ಇಷ್ಟು ಎಕರೆ ಜಮೀನಿನ ಮೇಲೆ ಕೊಡಬಾರದೆಂದು ಯಾವುದಾದರೂ ಕ್ಲೂಪ್ತವಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸಾಮಾನ್ಯವಾಗಿ ಎಲ್ಲರಿಗೂ ಒಂದೇ ಸಮಾನಾಗಿರುವಂತೆ ಹಂಚಬೇಕೆಂಬುದೇ ಸರ್ಕಾರದರ ಭಾವನೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಅದಕ್ಕೆ equal distribution ಅಲ್ಲದೆ ಮತ್ತೇನಾದರೂ ಕಾರಣ ವಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇನ್ನೂ ಅನೇಕ ಕಾರಣಗಳಿವೆ.

ಶ್ರೀ ಜಿ. ನಾರಾಯಣಗೌಡರು (ಕೋರಾರ ಜಿಲ್ಲೆ).—ತಾವು ಜಮೀನು ವಿಲೇವಾರಿಯಾಗಿದೆಯೆಂದು ಈಗತಾನೇ ತಿಳಿಸಿರತಕ್ಕದ್ದು ಎಲ್ಲಾ ತಾಲ್ಲೂಕುಗಳಿಗೂ ಅವ್ಯಯವಾಗುವುದಿಲ್ಲವೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಜಿ. ನಾರಾಯಣಗೌಡರು.—ಈ ಜಮೀನುಗಳನ್ನು ಹರಾಜು ಮೂಲಕ ವಿಲೇ ಮಾಡಿದರೆ ಸರ್ಕಾರಕ್ಕೆ ಹೆಚ್ಚು ಹಣ ಬರುತ್ತದೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಂದಿದೆ.

ಶ್ರೀ ಜಿ. ನಾರಾಯಣಗೌಡರು.—ಜಮೀನ್ದಾರರ ಅರ್ಜಿಗಳು ವಿಲೇವಾರಿಯಾಗದೆ ನಿಂತಿರುವುದು ಹೆಚ್ಚಾಗಿದೆಯೋ ಅಥವಾ ಜಮೀನ್ದಾರರಲ್ಲದವರ ಅರ್ಜಿ ಸಂಖ್ಯೆ ಹೆಚ್ಚಾಗಿದೆಯೋ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎರಡೂ ಇವೆ.

ಶ್ರೀ ಜಿ. ನಾರಾಯಣಗೌಡರು.—ಅದರಲ್ಲಿ ವಿದ್ಯಾವಂತರ ಅರ್ಜಿಗಳೂ ಇವೆಯಲ್ಲವೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಡಬೇಕು.

ಶ್ರೀ ಜಿ. ನಾರಾಯಣಗೌಡರು.—ಆಸಕ್ತಿಯಿಂದ ವ್ಯವಸಾಯ ಮಾಡಲು ಉದ್ಯುಕ್ತರಾಗಿರುವವರಿಗೆ ಮೊದಲು ಅವಕಾಶಕೊಡುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅನೇಕ ಸಂದರ್ಭಗಳಲ್ಲಿ ಅಂಥವರಿಗೆ ಸಹಾಯಮಾಡಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡರು (ತುಮಕೂರು ಜಿಲ್ಲೆ).—ಜಮೀನಿಲ್ಲದೇ ಇರುವವರಿಗೆ ಮಂಜೂರು ಮಾಡುತ್ತೇವೆಂದು ಅರ್ಜಿಗಳನ್ನು ಕೊಟ್ಟಿರಿ. ಹಾಗಾದರೆ ಒಂದೆರಡು ಸಾರಿ ಜಮೀನನ್ನು ತೆಗೆದುಕೊಂಡು ಮಾರಾಟಮಾಡಿ ಈಗ ಜಮೀನಿಲ್ಲದೇ ಇರುವವರಿಲ್ಲವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅಂಥ ಪ್ರಶ್ನೆಗೆ ಹಿಂದೆ ತಿಳಿಸಿದಂತೆ ತಕ್ಕ ಕ್ರಮ-ಅನುಸರಿಸಲಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡರು.—ಖುದ್ದು ವ್ಯವಸಾಯ ಮಾಡುವವರಿಗೂ ಮತ್ತು ಜಮೀನಿಲ್ಲದೇ ಇರುವವರಿಗೂ ಜಮೀನು ಕೊಟ್ಟು ಉತ್ಪತ್ತಿಜನವೀಯಬೇಕೆಂಬ ನಿರ್ಬಂಧವಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸಾಮಾನ್ಯವಾಗಿ ವ್ಯವಸಾಯ ಮಾಡುವವರಿಗೇ ಕೊಡಬೇಕೆಂದಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡರು.—ಜಮೀನು ದೂರದಲ್ಲಿದ್ದು ಸ್ವಂತ ವ್ಯವಸಾಯ ಮಾಡದೆ ಎಲ್ಲೋ ಬೇರೆ ಪಟ್ಟಣಗಳಲ್ಲಿರುವವರಿಗೆ ಜಮೀನು ಮಂಜೂರು ಮಾಡಿದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಗೋವಿಂದದಾಸ್‌ರವರು (ಹಾಸನ ಜಿಲ್ಲೆ—ನಿಮ್ಮ ಪಂಗಡ).—ಇದುವರೆಗೆ ಎಷ್ಟು ಎಕರೆಗಳು ವಿಲೇವಾರಿಯಾಗಿವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—313½ ಸಾವಿರ ಎಕರೆಯೆಂದು ಆಗಲೇ ತಿಳಿಸಿದೆ.

ಶ್ರೀ ಗೋವಿಂದದಾಸ್‌ರವರು.—ಆ ಪೈಕಿ ನಿಮ್ಮ ವರ್ಗದವರಿಗೆ ಇಷ್ಟು ಕೊಡಬೇಕೆಂದು ಸಂಬಂಧಪಟ್ಟ ಸಮಿತಿಯವರು ವರದಿಯಲ್ಲಿ ಸೂಚಿಸಿದ್ದರೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅವರಿಗೇ ಏನಾದರಾಗಿಡಬೇಕೆಂದಿಲ್ಲ. ಅವರಿಗೆ ಮೊದಲು ಕೊಡಲು ಅವಕಾಶವಿರಬೇಕೆಂದು ಸರ್ಕಾರದ ಆರ್ಡರಾಗಿದೆ.

ಶ್ರೀ ಗೋವಿಂದದಾಸ್‌ರವರು.—ನಿಮ್ಮ ವರ್ಗದವರಿಗೆ ಕಳೆದ ಮೂರು ವರ್ಷಗಳಿಂದ ಇದುವರೆಗೆ ಎಷ್ಟು ಜಮೀನು ಸೇರಿದೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—1947-48 ರಿಂದ ಮೂರು ವರ್ಷಗಳಲ್ಲಿ ಎಂಟು ಸಾವಿರ ಅರ್ಜಿದಾರರಿಗೆ ನುಮಾರು 25 ಸಾವಿರ ಎಕರೆಯಷ್ಟು ನಿಮ್ನ ವರ್ಗದವರಿಗೆ ಸಂಬಂಧಪಟ್ಟ ಕಾನೂನು ಪ್ರಕಾರ ಕೊಟ್ಟಿದೆ.

ಶ್ರೀ ಎರ್. ಎಚ್. ತಿಮ್ಮಾಬೋಯಿಯವರು (ಚಿಕ್ಕ ಮಗಳೂರು ಜಿಲ್ಲೆ—ನಿಮ್ನ ಪಂಗಡ).—ಏಕಸಾಲು ಸಾಗುವಳಿಗೆ ಕೊಡುವ ಜಮೀನನ್ನು ಸಾಮಾನ್ಯವಾಗಿ ಮಾರನೆಯ ವರ್ಷ ವಾಪಸು ತೆಗೆದುಕೊಳ್ಳುತ್ತೀರಾ ?

Mr. SPEAKER.—That becomes a general question.

ಶ್ರೀ ಎರ್. ಎಚ್. ತಿಮ್ಮಾಬೋಯಿಯವರು.—ಏಕ ಸಾಲಿಗೆ ಕೊಡುವುದನ್ನು ಖಾಯಂಮಾಡಲು ಕಾನೂನಿದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇದೆ.

ಶ್ರೀ ಎರ್. ಎಚ್. ತಿಮ್ಮಾಬೋಯಿಯವರು.—ಎಷ್ಟು ವರ್ಷ ಅದರೆ ಖಾಯಂ ಮಾಡುತ್ತೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆರೆಯ ಅಂಗಳ, ನದಿ ಬಯಲು ವಗೈರೆಗೆ ಒಂದೊಂದಕ್ಕೆ ಬೇರೆ ಬೇರೆ ರೀತಿಯಲ್ಲಿ ಕಾನೂನಿದೆ. ಯಾವ ಪ್ರದೇಶ ವೆಂದು ಖಚಿತವಾಗಿ ಹೇಳಿದರೆ ಒಳ್ಳೆಯದು.

ಶ್ರೀ ಎರ್. ಎಚ್. ತಿಮ್ಮಾಬೋಯಿಯವರು.—ಮರೆ ನಾಡಿನ ಕೆರೆಯ ಪ್ರದೇಶದಲ್ಲಿ ಹೇಗೆ ಮಾಡುತ್ತೀರಿ ?

ಅಧ್ಯಕ್ಷರು.—ಅದು ಈ ಪ್ರಶ್ನೆಯಿಂದ ಉದ್ಭವಿಸುವುದಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಮೈಸೂರು ಜಿಲ್ಲೆಯಲ್ಲಿ ಎಷ್ಟು ಜಮೀನು ಖಾಲಿ ಇದೆ ?

Mr. SPEAKER.—That supplementary does not arise.

ಶ್ರೀ ಎಸ್. ರಂಗರಾಮಯ್ಯನವರು.—ಜಮೀನು ಗಳನ್ನೇನೋ ಕೊಡುತ್ತೀರಿ. ಆದರೆ ಪ್ರತಿ ಜಿಲ್ಲೆಯಲ್ಲೂ ಎಷ್ಟು ಜಮೀನಿದೆಯೆಂದು ತಿಳಿಯುವುದಕ್ಕೆ ಸೌಕರ್ಯ ಕಲ್ಪಿಸಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕಲ್ಪಿಸಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಎಲ್ಲ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಆಫೀಸುಗಳಲ್ಲಿ.

ಶ್ರೀ ಎಚ್. ರಂಗರಾಮಯ್ಯನವರು.—ಜಮೀನು ಯಾವುದು ಉತ್ತಮವಾದದ್ದು, ಯಾವುದು ಸಾಧಾರಣ ಎಂದು ವಿಂಗಡಿಸಿದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ವಿಂಗಡಿಸಿದೆ ಮತ್ತು ಸಾರ್ವಜನಿಕರಿಗೆ ಅದು ಚೆನ್ನಾಗಿ ಗೊತ್ತಾಗುವ ಹಾಗೆ ವ್ಯವಸ್ಥೆಮಾಡಲು ತಾಲ್ಲೂಕು ಆಫೀಸಿಗೆ ತಿಳಿಸಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಕೆಲವು ಜಿಲ್ಲೆಗಳಲ್ಲಿ ಕನಿಷ್ಠ ಪಕ್ಷ ಒಂದೊಂದು ದರಖಾಸ್ತಿಗೆ ಇಷ್ಟು ಕೊಡಬಹುದೆಂದು ನಿರ್ಧರವಾಗಿರುವುದು ಸರ್ಕಾರದ ವರೆಗೆ ಬಂದಿದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸಾಮಾನ್ಯವಾಗಿ ಕೆಲವು ಕಡೆ ಬಹಳ ಬೆಲೆ ಬಾಳುವ ಜಮೀನಾಗಿದ್ದರೆ ಎರಡು ಎಕರೆ ತರಿಯನ್ನು ಕೊಡುವುದು ನೂಕ್ಕವೆಂದಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಬೆಲೆ ನಿಷ್ಕೃಷ್ಟ ಯಾಗಿದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎಕರೆಗೆ ಈಗ 300 ರೂಪಾಯಿಗಳಾಗಿವೆ; ಒಂದು ವರ್ಷದ ಹಿಂದೆ 200 ರೂಪಾಯಿಗಳಿತ್ತು, ಅದು ಜಮೀನು ದರ್ಜೆಯ ಮೇಲೆ ಹೋಗುತ್ತದೆಯಾದ್ದರಿಂದ ತಪಶೀಲನ್ನು ನೋಡಿ ಹೇಳಬೇಕು.

ಶ್ರೀ ಎಸ್. ರಂಗರಾಮಯ್ಯನವರು.—ಯಾವುದಾದರೂ ಸಂಸ್ಥೆಗಳ ಪರವಾಗಿ ಕೇಳಿದರೆ ಕೊಡುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎಷ್ಟೋ ಸಂದರ್ಭಗಳಲ್ಲಿ ಕೊಟ್ಟಿದೆ.

ಶ್ರೀ ಎಸ್. ರಂಗರಾಮಯ್ಯನವರು.—ತಾವು ಕೊಟ್ಟಿರುವುದು ವಿದ್ಯಾ ಸಂಸ್ಥೆಗೇ ಅಥವಾ ಮಠಗಳಿಗೇ ಅಥವಾ ಧರ್ಮಸಂಸ್ಥೆಗೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎಲ್ಲಕ್ಕೂ ಕೊಟ್ಟಿದೆ.

ಶ್ರೀ ಬಿ. ಎಕ್. ಬೋರಣ್ಣಗೌಡರು (ಹಾಸನ ಜಿಲ್ಲೆ).—ದರಖಾಸ್ತುದಾರರಿಗೆ ರಾಯಕ್ಕಾದ ಜಮೀನು ಕೊಡುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ವ್ಯವಸಾಯಕ್ಕೆ ಯೋಗ್ಯವಾದ ಸರ್ಕಾರಿ ಜಮೀನಾಗಿದ್ದರೆ ದರ ಖಾಸ್ತುದಾರರಿಗೆ ಕೊಡಬಹುದು.

ಶ್ರೀ ಬಿ. ಎಕ್. ಬೋರಣ್ಣಗೌಡರು.—ಗೋಮಾಳ ಸರ್ಕಾರಿ ಜಮೀನು ತಾನೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೌದು.

ಶ್ರೀ ಬಿ. ಎಕ್. ಬೋರಣ್ಣಗೌಡರು.—ಗೋಮಾಳ ಸಾಲದೇ ಇರುವ ಕಡೆಯೂ ಸಾಗಿಗೆ ಕೊಟ್ಟಿರುವುದು ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಬಂದಿದೆ. ಅಂಥ ಸಂದರ್ಭದಲ್ಲಿ ನೂಕ್ಕ ಕಾರ್ಯಕ್ರಮ ಕೈಗೊಂಡಿದೆ.

ಶ್ರೀ ಟಿ. ರಾಮಾಚಾರ್‌ರವರು (ಕೋಲಾರ ಜಿಲ್ಲೆ).—ಕೋಲಾರ ಜಿಲ್ಲೆಯಲ್ಲಿ ಕೋ-ಆಪರೇಟಿವ್ ಫಾರ್ಮಿಂಗ್ ಸೊಸೈಟಿಗಳಿಗೆ ಕೊಟ್ಟಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಸಂಸ್ಥೆಗೆ ಸಂಬಂಧಪಟ್ಟಿರುವುದರಿಂದ ನೋಡಿ ಹೇಳಬೇಕು.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ—ನಿಮ್ನ ಪಂಗಡ).—ಈ ಜಮೀನು ವಿರೇಮಾಡುವುದು ಬೊಕ್ಕನಕ್ಕೆ ಹಣ ತುಂಬಬೇಕೆಂಬ ಉದ್ದೇಶದಿಂದರೇ ಅಥವಾ ಆಹಾರವನ್ನು ಹೆಚ್ಚಾಗಿ ಬೆಳೆಯಬೇಕೆಂಬ ಉದ್ದೇಶದಿಂದರೇ ?

Mr. SPEAKER.—It is not a proper supplementary question.

ಶ್ರೀ ಸುಬ್ಬರಾಯಶೆಟ್ಟರು (ಕೋಲಾರ ಜಿಲ್ಲೆ).—ಜಮೀನು ಇಲ್ಲದೇಇರುವವರಿಗೆ ಕೊಡಬೇಕೆಂದು ನಿಗದಿ ಮಾಡಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದಕ್ಕೆ ಆಗಲೇ ಉತ್ತರ ಹೇಳಿದೆ.

ಶ್ರೀ ಸುಬ್ಬರಾಯಶೆಟ್ಟರು.—ಜಮೀನಿರುವವರು ಮತ್ತೆ ದರಖಾಸ್ತು ಕೊಟ್ಟರೆ ಅದನ್ನು ಸಹಾನುಭೂತಿಯಿಂದ ಪರಿಶೀಲನೆಮಾಡುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆಯಾ ಸಂದರ್ಭಗಳ ವಿದ್ಯಮಾನ ನೋಡಿ ಮಾಡಬೇಕಾಗುತ್ತದೆ. ಇದೆಲ್ಲವೂ ನಿರ್ದಿಷ್ಟವಾಗಿ ಕಾನೂನಿನಲ್ಲಿ ಅಡಕವಾಗಿದೆ.